# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 77

ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ

ಉತ್ತರಿಸುವ ಸಚಿವರು : ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 09-07-2018

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೊಡಗು ಜಿಲ್ಲೆಯ ಮಡಿಕೇರಿ-ಮೂರ್ನಾಡು-ನಾಪೋಕ್ಲು-ಎರ್ಮೆಮಾಡು-ಭಾಗಮಂಡಲ-ಕರಿಕೆ-ಪಾಣತ್ತೂರು-ಕಾಸರಗೋಡು ಈ ಮಾರ್ಗದಲ್ಲಿ ಸೂಕ್ತ ಸರ್ಕಾರಿ ಬಸ್ ಸಂಚಾರ ವ್ಯವಸ್ಥೆ ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಮಡಿಕೇರಿ-ಕಾಸರಗೋಡು ವಯಾ ಮೂರ್ನಾಡು, ನಾಪೋಕ್ಲು, ಎಮ್ಮೆಮಾಡು, ಭಾಗಮಂಡಲ, ಕರಿಕೆ, ಪಾಣತ್ತೂರು ಮಾರ್ಗವು ಅಂತರರಾಜ್ಯ ಮಾರ್ಗವಾಗಿರುತ್ತದೆ.<br><br>ಸದ್ಧರಿ ಮಾರ್ಗವು ಪ್ರಸ್ತುತ ಚಾಲ್ತಿಯಲ್ಲಿರುವ ಕರ್ನಾಟಕ ಹಾಗೂ ಕೇರಳ ರಾಜ್ಯಗಳ ನಡುವಿನ ಅಂತರರಾಜ್ಯ ಪೂರಕ ಸಾರಿಗೆ ಒಪ್ಪಂದದಲ್ಲಿ ಸೇರಿರುವುದಿಲ್ಲ.<br><br>ಆದಾಗ್ಯೂ, ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ನಿಗಮದ ಮಂಗಳೂರು ವಿಭಾಗ ಮಂಗಳೂರು-3ನೇ ಘಟಕದ ಅನುಸೂಚಿ ಸಂಖ್ಯೆ 5/6ರಲ್ಲಿ ಮೈಸೂರು-ಮಡಿಕೇರಿ-ಮಂಗಳೂರು ವಯಾ ಮೂರ್ನಾಡು, ನಾಪೋಕ್ಲು, ಎಮ್ಮೆಮಾಡು, ಭಾಗಮಂಡಲ, ಕರಿಕೆ, ಪಾಣತ್ತೂರು, ಕಾಂಞಗಾಡ್, ಕಾಸರಗೋಡು ಮಾರ್ಗದಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.<br><br>ಮಡಿಕೇರಿಯಿಂದ ಭಾಗಮಂಡಲ, ಕರಿಕೆ ನಂತರ ಬರುವ ಕರ್ನಾಟಕ/ಕೇರಳ ರಾಜ್ಯಗಡಿವರೆಗಿನ ಮಾರ್ಗವು ರಾಷ್ಟ್ರೀಕೃತವಾಗದ ವಲಯದಲ್ಲಿದ್ದು, ಖಾಸಗಿ ಪ್ರವರ್ತಕರ ಸಾರಿಗೆ ಸೌಲಭ್ಯ ಆಚರಣೆಯಲ್ಲಿದೆ. |
| ಆ | ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಈ ಮಾರ್ಗದ ಪ್ರಯಾಣಿಕರಿಗೆ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸುವ ಸಲುವಾಗಿ ನಿಗಮದ ಮಂಗಳೂರು-1ನೇ ಘಟಕದಿಂದ ಅನುಸೂಚಿ ಸಂಖ್ಯೆ 194/195 ರಲ್ಲಿ ಮಂಗಳೂರು-ಮೈಸೂರು ವಯಾ ಕಾಸರಗೋಡು, ಕಾಂಞಗಾಡ್, ಪಾಣತ್ತೂರು, ಕರಿಕೆ, ಭಾಗಮಂಡಲ, ಎಮ್ಮೆಮಾಡು, ನಾಪೋಕ್ಲು, ಮಡಿಕೇರಿ ಮಾರ್ಗದಲ್ಲಿ ಹಾಗೂ ಅನುಸೂಚಿ ಸಂಖ್ಯೆ 196/197ರಲ್ಲಿ ಮಂಗಳೂರು-ಮೈಸೂರು ವಯಾ ಕಾಸರಗೋಡು, ಕಾಂಞಗಾಡ್, ಪಾಣತ್ತೂರು, ಕರಿಕೆ, ಭಾಗಮಂಡಲ, ಎಮ್ಮೆಮಾಡು, ನಾಪೋಕ್ಲು, ವಿರಾಜಪೇಟೆ ಮಾರ್ಗದಲ್ಲಿ ಅನುಕ್ರಮವಾಗಿ ದಿನಾಂಕ 13.03.2018 ಹಾಗೂ 14.03.2018ರಿಂದ ನೂತನ ಸಾರಿಗೆಗಳನ್ನು ಪ್ರಾರಂಭಿಸಲಾಗಿತ್ತು, ಆದರೆ, ಈ ಸಾರಿಗೆಗಳಿಗೆ ಸಾರ್ವಜನಿಕ ಪ್ರಯಾಣಿಕರಿಂದ ನಿರೀಕ್ಷಿತ ಪ್ರಮಾಣದಲ್ಲಿ ಉತ್ತೇಜನ ದೊರಕದೆ ನಷ್ಟ ಅನುಭವಿಸಿದ ಕಾರಣ, ಈ ಸಾರಿಗೆಗಳನ್ನು ದಿನಾಂಕ 30-4-2018ರಿಂದ ರದ್ದುಗೊಳಿಸಲಾಗಿದೆ.<br><br>ಈ ಸಾರಿಗೆಗಳು ನಷ್ಟ ಅನುಭವಿಸಿದ್ದರಿಂದ ಇವುಗಳನ್ನು ಪುನಃ ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ. |
| ಇ | ಸದರಿ ಮಾರ್ಗದಲ್ಲಿ ಸಾಕಷ್ಟು ಸರ್ಕಾರಿ ಬಸ್ಸುಗಳು ಸಂಚರಿಸುವಂತೆ ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು? | |

ಸಂ: ಸಾರಿಇ 82 ಸಾಸಂಪ್ರ 2018

(ಡಿ.ಸಿ. ತಮ್ಮಣ್ಣ)
ಸಾರಿಗೆ ಸಚಿವರು